## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಾರ್ಯಕ್ರಮಗಳನ್ನು ಮಿಷನ್ ಮೋಡ್ ಮೂಲಕ ಅನುಷ್ಠಾನಗೊಳಿಸುವುದು - ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮಿಷನ್‌ಗಳ ರಚನೆ.**

### ಪ್ರಸ್ತಾವನೆ:

ಸರ್ಕಾರಿ ಆದೇಶ ಸಂ: ಸಿಆಸುಇ 164 ಸಉಸೇ 2016, ದಿನಾಂಕ: 24.09.2016 ರನ್ವಯ ರಾಜ್ಯದ ವಿವಿಧ ಇಲಾಖೆಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೆಡೆ ತರುವ ಮೂಲಕ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸ್ಥಾಪಿಸಲಾಗಿದೆ. 2017-18ನೇ ಸಾಲಿಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ 5 ಲಕ್ಷ ಯುವಕ ಯುವತಿಯರಿಗೆ ಕೌಶಲ್ಯ ತರಬೇತಿಯನ್ನು ನೀಡಿ ಯೋಗ್ಯ ಉದ್ಯೋಗವನ್ನು ದೊರಕಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. ತರಬೇತಿ ಹೊಂದಿದ ಶೇಕಡ 70 ರಷ್ಟು ಜನರಿಗೆ ಉದ್ಯೋಗ ಒದಗಿಸಬೇಕಾಗಿದೆ. ಇದರೊಂದಿಗೆ ಉದ್ಯಮಶೀಲತೆ ಮತ್ತು ಜೀವನೋಪಾಯಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಮಿಷನ್ ಮೋಡ್ ಮೂಲಕ ಅನುಷ್ಠಾನಗೊಳಿಸಬೇಕಾಗಿದೆ.

ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕೌಶಲ್ಯ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯ ಪ್ರಕಾರ ಸದರಿ ಯೋಜನೆಯ ಅನುಷ್ಠಾನದಲ್ಲಿ ಗುಣಮಟ್ಟದ ತರಬೇತಿ ಮತ್ತು ಮೂಲ ಸೌಕರ್ಯ, ತರಬೇತಿ ಹೊಂದಿದ, ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿ, ಇತ್ಯಾದಿ ವಿಷಯಗಳ ಕುರಿತು ಮೇಲ್ವಿಚಾರಣೆಯನ್ನು ಕೈಗೊಳ್ಳಲು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕೌಶಲ್ಯ ಮಿಷನ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ 2017-18 ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಒಟ್ಟು 92 ಸಾವಿರ ಅಭ್ಯರ್ಥಿಗಳಿಗೆ ತರಬೇತಿ ನೀಡಿ ಸ್ಥಳ ನಿಯುಕ್ತಿ ಕೈಗೊಳ್ಳಲು ಹಾಗೂ ಅದಕ್ಕಾಗಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮಿಷನ್‌ಗಳನ್ನು ರಚಿಸುವ ಅವಶ್ಯಕತೆ ಇದೆ. ಈ ಮೇಲೆ ವಿವರಿಸಿದ ಕಾರಣಗಳಿಂದ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಕೌಉಜೀಇ 152 ಕೈತಇ 2017**
**ಬೆಂಗಳೂರು ದಿನಾಂಕ: 08.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಮಿಷನ್‌ಗಳನ್ನು ರಚಿಸಿದೆ. ಈ ಮಿಷನ್ನುಗಳು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳ ಅನುಷ್ಠಾನವನ್ನು ಮಿಷನ್ ಮೋಡ್ ಮೂಲಕ ಕೈಗೊಂಡು ನಿರೀಕ್ಷಿತ ಫಲಿತಾಂಶ ಮತ್ತು ಫಲಶೃತಿಯನ್ನು ಸಾಧಿಸಲು ಆದೇಶಿಸಿದೆ.

**ರಾಜ್ಯಮಟ್ಟ: ಕರ್ನಾಟಕ ಕೌಶಲ್ಯ ಮಿಷನ್**

**ಕರ್ನಾಟಕ ಕೌಶಲ್ಯ ಮಿಷನ್ನಿನ ರಚನೆಯು ಈ ಕೆಳಗಿನಂತಿದೆ:**

| | | |
|---|---|---|
| 1. | ಮುಖ್ಯ ಮಂತ್ರಿಗಳು | ಅಧ್ಯಕ್ಷರು |
| 2. | ಕಾರ್ಮಿಕ ಸಚಿವರು | ಉಪಾಧ್ಯಕ್ಷರು |
| 3. | ಉನ್ನತ ಶಿಕ್ಷಣ ಸಚಿವರು | ಸದಸ್ಯರು |
| 4. | ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಸಚಿವರು | ಸದಸ್ಯರು |
| 5. | ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು | ಸದಸ್ಯರು |
| 6. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 7. | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು | ಸದಸ್ಯರು |
| 8. | ಯೋಜನಾ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು | ಸದಸ್ಯರು |
| 9. | ನಗರಾಭಿವೃದ್ಧಿ ಸಚಿವರು | ಸದಸ್ಯರು |
| 10. | ಸಮಾಜ ಕಲ್ಯಾಣ ಸಚಿವರು | ಸದಸ್ಯರು |
| 11. | ಸರ್ಕಾರದ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 12. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | |
| 13. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| 14. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಯೋಜನಾ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಸದಸ್ಯರು |
| 15. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| 16. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 17. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ | ಸದಸ್ಯರು |
| 18. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಸದಸ್ಯರು |
| 19. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕಾರ್ಮಿಕ ಇಲಾಖೆ | ಸದಸ್ಯರು |
| 20. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ) | ಸದಸ್ಯರು |
| 21. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂ. ಎಸ್.ಎಂ.ಇ. ಮತ್ತು ಗಣಿ) | ಸದಸ್ಯರು |
| 22. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 23. | ಚೇರಮನ್ ಎಸ್‌ಎಲ್‌ಬಿಸಿ | ಸದಸ್ಯರು |
| 24. | ಕೈಗಾರಿಕಾ ಕ್ಷೇತ್ರದ ಇಬ್ಬರು ಪ್ರತಿನಿಧಿಗಳು | ಸದಸ್ಯರು |
| 25. | ವೃತ್ತಿ ತರಬೇತಿ ಸಂಸ್ಥೆಗಳ ಇಬ್ಬರು ಪ್ರತಿನಿಧಿಗಳು | ಸದಸ್ಯರು |
| 26. | ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದ ಪ್ರತಿನಿಧಿಗಳು / ರಾಜ್ಯ ಸಮನ್ವಯಾಧಿಕಾರಿಗಳು | ಸದಸ್ಯರು |
| 27. | ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಕರ್ನಾಟಕ ಕೌಶಲ್ಯ ಮಿಷನ್ನಿನ ಪ್ರಮುಖ ಪ್ರಕಾರ್ಯಗಳು ಈ ಕೆಳಗಿನಂತಿವೆ:**

ಅ. ಒಟ್ಟಾರೆ ಮಾರ್ಗದರ್ಶನ ಮತ್ತು ನೀತಿ ನಿರ್ದೇಶನಗಳನ್ನು ನೀಡುವುದು.

ಆ. ವಿವಿಧ ಇಲಾಖೆಗಳ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯಗಳಿಗೆ ಸಂಬಂಧಿಸಿದ ಯೋಜನೆಗಳು ಮತ್ತು ಉಪಕ್ರಮಗಳ ಏಕೀಕರಣದ ಉಸ್ತುವಾರಿಯನ್ನು ಕೈಗೊಳ್ಳುವುದು.

ಇ. ಮಿಷನ್ ಚಟುವಟಿಕೆಗಳ ಒಟ್ಟಾರೆ ಪ್ರಗತಿ ಮತ್ತು ಅಭಿವೃದ್ಧಿಯ ಪರಿಶೀಲನೆಯನ್ನು ಕೈಗೊಳ್ಳುವುದು.

ಈ. ರಾಜ್ಯದ ಕೆಳಹಂತದ ಕೌಶಲ್ಯದ ಮಿಷನ್ನುಗಳ ಉಸ್ತುವಾರಿಯನ್ನು ಮಾಡುವುದು.

ಉ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಇತರೆ ಯಾವುದೇ ವಿಷಯಗಳು.

ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 93 ಕೈತಇ 2017 ದಿನಾಂಕ:20.04.2017 ರ ಮೂಲಕ ವೃತ್ತಿ ತರಬೇತಿ ಸಂಸ್ಥೆಗಳ ಹಾಗೂ ಮೌಲ್ಯಮಾಪನ (Assessing) ಸಂಸ್ಥೆಗಳ/ಸಮಾಲೋಚಕರುಗಳ ಆಯ್ಕೆ ಸೇರಿದಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದ್ದು ಸದರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಕರ್ನಾಟಕ ಕೌಶಲ್ಯ ಮಿಷನ್ನಿನ ಸಭೆಯಲ್ಲಿ ಗಮನಕ್ಕೆ ತರುವುದು.

**ಮಿಷನ್ ಸಚಿವಾಲಯ : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**

ಮಿಷನ್ ಸಚಿವಾಲಯವು ಕರ್ನಾಟಕ ಕೌಶಲ್ಯ ಮಿಷನ್ ಅಡಿಯಲ್ಲಿ ಕಾರ್ಯನಿರ್ವಹಿಸುವುದು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ರಾಜ್ಯ ಮಿಷನ್ನಿನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವರು ಹಾಗೂ ಅವರಿಗೆ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 164 ಸಉಸೇ 2016, ದಿನಾಂಕ: 24.09.2016 ರ ಪ್ರಕಾರ ಸೃಜಿಸಿದ ಸಚಿವಾಲಯ ಮತ್ತು ಮೂರು ಆಯುಕ್ತಾಲಯಗಳು / ಸಂಸ್ಥೆಗಳು ಬೆಂಬಲವನ್ನು ನೀಡುವುವು ಮತ್ತು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ ಸಿಬ್ಬಂದಿಯ ಸಹಾಯವನ್ನು ಪಡೆಯಲಾಗುವುದು. ಕೌಶಲ್ಯಾಭಿವೃದ್ಧಿ ಮತ್ತು ಶಿಶುಕ್ಷು ಯೋಜನೆಗಳ ಅನುಷ್ಠಾನದಲ್ಲಿ ಮಿಷನ್ ನಿರ್ದೇಶಕರಾಗಿ ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಮಿಷನ್ ಕಾರ್ಯದರ್ಶಿಗಳಿಗೆ ನೆರವಾಗುವರು. ಉದ್ಯಮಶೀಲತೆ ಮತ್ತು ಜೀವನೋಪಾಯ ಯೋಜನೆಗಳ ಅನುಷ್ಠಾನದಲ್ಲಿ ಮಿಷನ್ ನಿರ್ದೇಶಕರಾಗಿ ಮಿಷನ್ ನಿರ್ದೇಶಕರು, ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ ಇವರು ಮಿಷನ್ ಕಾರ್ಯದರ್ಶಿಗಳಿಗೆ ನೆರವಾಗುವರು. ರಾಜ್ಯ ಮಟ್ಟದಿಂದ ಗ್ರಾಮ ಪಂಚಾಯ್ತಿವರೆಗಿನ ಪ್ರಸ್ತಾವಿತ ಪ್ರಕಾರ್ಯಗಳು ಮತ್ತು ಚಟುವಟಿಕೆಗಳನ್ನು ಈ ಸಚಿವಾಲಯಕ್ಕೆ ಜೋಡಿಸಲಾಗುವುದು. ಎನ್.ಆರ್.ಎಲ್.ಎಂ. ಮತ್ತು ಎನ್.ಯು.ಎಲ್.ಎಂ. ಇವೆರಡು ಈ ಮಿಷನ್ನಿನ ಎರಡು ಉಪ ಮಿಷನ್‌ಗಳಾಗಿ ಕಾರ್ಯನಿರ್ವಹಿಸುವುವು.

**ಮಿಷನ್ ಸಚಿವಾಲಯದ ಪ್ರಕಾರ್ಯಗಳು ಈ ಕೆಳಗಿನಂತಿವೆ:**

ಅ. ಮಿಷನ್ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಉಸ್ತುವಾರಿಯನ್ನು ಕೈಗೊಳ್ಳುವುದು.

ಆ. ಕರ್ನಾಟಕ ಕೌಶಲ್ಯ ಮಿಷನ್ ಮತ್ತು ಅಧಿಕಾರಯುಕ್ತ ಸಮಿತಿಯ ನಿರ್ಧಾರಗಳ ಅನುಷ್ಠಾನದ ಸಮನ್ವಯವನ್ನು ಕೈಗೊಳ್ಳುವುದು.

ಇ. ರಾಜ್ಯದ ಪ್ರಯತ್ನಗಳು ಮತ್ತು ಸಬ್–ಮಿಷನ್‌ಗಳ ಸಮನ್ವಯವನ್ನು ಕೈಗೊಳ್ಳುವುದು.

ಈ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಕಾರ್ಯಕ್ರಮಗಳ ಅನುಷ್ಠಾನದ ಸಮನ್ವಯವನ್ನು ಕೈಗೊಳ್ಳುವುದು.

### ಕರ್ನಾಟಕ ಕೌಶಲ್ಯ ಮಿಷನ್ ನಿಧಿ:

ಕರ್ನಾಟಕದಲ್ಲಿ ಕೌಶಲ್ಯಾಭಿವೃದ್ಧಿಗಾಗಿ ಕರ್ನಾಟಕ ಕೌಶಲ್ಯ ಮಿಷನ್ ನಿಧಿ ಎಂಬ ನಿಧಿಯನ್ನು ಸ್ಥಾಪಿಸಲಾಗುವುದು. ಈ ನಿಧಿಗೆ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ, ಇತರ ಯವುದೇ ದೇಣಿಗೆಗಳು, ಇತ್ಯಾದಿ ಹಣವನ್ನು ಪಡೆಯುವುದು. ಈ ನಿಧಿಯನ್ನು ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಹಾಗೂ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಜಂಟಿಯಾಗಿ ನಿರ್ವಹಿಸುವರು. ಕರ್ನಾಟಕ ಕೌಶಲ್ಯ ಮಿಷನ್ನಿನ ಆಡಳಿತ ಪರಿಷತ್ತು ಅನುಮೋದಿಸುವ ನಿಯಮ ಮತ್ತು ನಿಬಂಧನೆಗಳಂತೆ ಕರ್ನಾಟಕ ಕೌಶಲ್ಯ ಮಿಷನ್ ನಿಧಿಯ ನಿರ್ವಹಣೆಯನ್ನು ಮಾಡಲಾಗುವುದು.

### ಜಿಲ್ಲಾ ಮಟ್ಟ: ಜಿಲ್ಲಾ ಕೌಶಲ್ಯ ಮಿಷನ್

**ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಕೌಶಲ್ಯ ಮಿಷನ್ನಿನ ರಚನೆಯು ಈ ಕೆಳಗಿನಂತಿದೆ:**

| | | |
|---|---|---|
| 1. | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | ಸಹ–ಅಧ್ಯಕ್ಷರು |
| 3. | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 4. | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| 5. | ಜಂಟಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 6. | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 7. | ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ | ಸದಸ್ಯರು |
| 8. | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 9. | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 10. | ಕಾರ್ಮಿಕ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯರು |
| 11. | ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯರು |
| 12. | ಯೋಜನಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ | ಸದಸ್ಯರು |
| 13. | ಪ್ರಾಂಶುಪಾಲರು, ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆ | ಸದಸ್ಯರು |
| 14. | ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ | ಸದಸ್ಯರು |
| 15. | ಆಯುಕ್ತರು, ನಗರಸಭೆ ಮತ್ತು ನಗರಪಾಲಿಕೆಗಳು | ಸದಸ್ಯರು |
| 16. | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳು | ಸದಸ್ಯರು |
| 17. | ಕೈಗಾರಿಕಾ ಕ್ಷೇತ್ರದ ಇಬ್ಬರು ಪ್ರತಿನಿಧಿಗಳು | ಸದಸ್ಯರು |
| 18. | ವೃತ್ತಿ ತರಬೇತಿ ಸಂಸ್ಥೆಗಳ ಇಬ್ಬರು ಪ್ರತಿನಿಧಿಗಳು | ಸದಸ್ಯರು |
| 19. | ಜಿಲ್ಲಾ ಉದ್ಯೋಗಾಧಿಕಾರಿಗಳು | ಸದಸ್ಯರು |
| 20. | ಯೋಜನಾಧಿಕಾರಿಗಳು, ಡಿ.ಆರ್.ಡಿ.ಎ. ಜಿಲ್ಲಾ ಪಂಚಾಯತ್ | ಸದಸ್ಯ–ಕಾರ್ಯದರ್ಶಿ |

## ಜಿಲ್ಲಾ ಕೌಶಲ್ಯ ಮಿಷನ್ನಿನ ಪ್ರಮುಖ ಪ್ರಕಾರ್ಯಗಳು ಈ ಕೆಳಗಿನಂತಿವೆ:

ಅ. ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು.

ಆ. ಎನ್.ಆರ್.ಎಲ್.ಎಮ್, ಎನ್.ಯು.ಎಲ್.ಎಮ್ ಮತ್ತು ಇತರೆ ಯೋಜನೆಗಳ ಅಡಿಯಲ್ಲಿ ರಚಿಸಿದ ಜಿಲ್ಲಾ ಮಟ್ಟದ ಮಿಷನ್ ಅಥವಾ ಸಮಿತಿಗಳ ಅಧಿಕಾರಿಗಳನ್ನು ಈ ಮಿಷನ್ ಸಭೆಗೆ ಆಹ್ವಾನಿಸಿ ಸದರಿ ಮಿಷನ್ ಮತ್ತು ಸಮಿತಿಗಳ ಸಭೆಯನ್ನು ಈ ಸಭೆಯಲ್ಲಿಯೆ ನಡೆಸಬೇಕು.

ಇ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳ ಯೋಜನಾ ನಿರೂಪಣೆ, ಉಸ್ತುವಾರಿ, ಅನುಷ್ಠಾನ ಕಾರ್ಯಗಳನ್ನು ಕೈಗೊಳ್ಳುವುದು.

ಈ. ಶಿಶಿಕ್ಷು ತರಬೇತಿಯು ಸೇರಿದಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳ ಅಭ್ಯರ್ಥಿಗಳ ಕ್ರೋಢೀಕರಣ (ಮೊಬಿಲೈಜೆಷನ್).ಫಲಾನುಭವಿಗಳ ಆಯ್ಕೆ, ತರಬೇತಿ ಮತ್ತು ಉದ್ಯೋಗ ನಿಯುಕ್ತಿ.

ಉ. ವೃತ್ತಿ ತರಬೇತಿ ಸಂಸ್ಥೆಗಳ ಕ್ರೋಢೀಕರಣ (ಮೊಬಿಲೈಜೆಷನ್) ಮತ್ತು ಮೇಲ್ವಿಚಾರಣೆ.

ಊ. ವೃತ್ತಿ ಮಾರ್ಗದರ್ಶನ, ಸಮಾಲೋಚನೆ ಮತ್ತು ಸ್ಥಳ ನಿಯುಕ್ತಿ ಸೇವಾ ಕೇಂದ್ರಗಳ ಸ್ಥಾಪನೆ ಮತ್ತು ಮೇಲ್ವಿಚಾರಣೆ

ಋ. ಹಿಮ್ಮುಖ ಮತ್ತು ಮುಮ್ಮುಖ ಸಂಪರ್ಕಗಳನ್ನು ಸ್ಥಾಪಿಸುವುದು.

ಎ. ಅಂತರ್ ಇಲಾಖಾ ಸಮನ್ವಯವನ್ನು ಕೈಗೊಳ್ಳುವುದು.

ಏ. ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮೂಲಕ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಕೈಗೊಳ್ಳುವುದು.

ಐ. ಮೇಲಿನ ವಿಷಯಗಳಿಗೆ ಸಂಬಂಧಪಟ್ಟ ಜಿಲ್ಲಾಮಟ್ಟದ ಅಧಿಕಾರಿಗಳನ್ನು ನಾಮ ನಿರ್ದೇಶನ ಮಾಡುವುದು.

ಒ. ಕರ್ನಾಟಕ ಕೌಶಲ್ಯ ಮಿಷನ್ನಿನಿಂದ ವಹಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ನಿರ್ವಹಿಸುವುದು.

## ತಾಲ್ಲೂಕು ಮಟ್ಟ: ತಾಲ್ಲೂಕು ಕೌಶಲ್ಯ ಮಿಷನ್

**ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕು ಕೌಶಲ್ಯ ಮಿಷನ್ನಿನ ರಚನೆಯು ಈ ಕೆಳಗಿನಂತಿದೆ:**

| | | |
|---|---|---|
| 1. | ಸಹಾಯಕ ಆಯುಕ್ತರು | ಅಧ್ಯಕ್ಷರು |
| 2. | ಸಹಾಯಕ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 3. | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 4. | ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ | ಸದಸ್ಯರು |
| 5. | ಬ್ಲಾಕ್ ಶಿಕ್ಷಣಾಧಿಕಾರಿ | ಸದಸ್ಯರು |
| 6. | ಮುಖ್ಯಾಧಿಕಾರಿ ಟಿ.ಎಮ್.ಸಿ/ಟಿ.ಪಿ/ಎನ್.ಎ | ಸದಸ್ಯರು |
| 7. | ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರತಿನಿಧಿ | ಸದಸ್ಯರು |
| 8. | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ಗ್ರಾಮ ಪಂಚಾಯತಿಗಳು | ಸದಸ್ಯರು |
| 9. | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ | ಸದಸ್ಯ ಕಾರ್ಯದರ್ಶಿ |

**ತಾಲ್ಲೂಕು ಕೌಶಲ್ಯ ಮಿಷನ್ನಿನ ಪ್ರಮುಖ ಪ್ರಕಾರ್ಯಗಳು ಈ ಕೆಳಗಿನಂತಿವೆ:**

ಅ. ಕನಿಷ್ಠ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು.

ಆ. ಎನ್.ಆರ್.ಎಲ್.ಎಮ್, ಎನ್.ಯು.ಎಲ್.ಎಮ್ ಮತ್ತು ಇತರೆ ಯೋಜನೆಗಳ ಅಡಿಯಲ್ಲಿ ರಚಿಸಿದ ತಾಲ್ಲೂ ಮಟ್ಟದ ಮಿಷನ್ ಅಥವಾ ಸಮಿತಿಗಳ ಅಧಿಕಾರಿಗಳನ್ನು ಈ ಮಿಷನ್ ಸಭೆಗೆ ಆಹ್ವಾನಿಸಿ ಸದರಿ ಮಿಷನ್ ಮ ಸಮಿತಿಗಳ ಸಭೆಯನ್ನು ಈ ಸಭೆಯಲ್ಲಿಯೆ ನಡೆಸಬೇಕು.

ಇ. ಶಿಶಿಕ್ಷು ತರಬೇತಿಯು ಸೇರಿದಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆ ಅಭ್ಯರ್ಥಿಗಳ ಕ್ರೋಢೀಕರಣ (ಮೊಬಿಲೈಜೆಷನ್).

ಈ. ಹಿಮ್ಮುಖ ಮತ್ತು ಮುಮ್ಮುಖ ಸಂಪರ್ಕಗಳನ್ನು ಸ್ಥಾಪಿಸುವುದು.

ಉ. ಅಂತರ ಇಲಾಖೆಯ ಸಹಕಾರ.

ಊ. ಗ್ರಾಮ ಪಂಚಾಯಿತಿಗಳು, ಪುರ ಸಭೆಗಳು, ಪಟ್ಟಣ ಪಂಚಾಯತಿಗಳು, ಎನ್‌ಜಿಓ ಮತ್ತು ಶೈಕ್ಷಣಿಕ ಸಂಸ್ಥೆ ಮೂಲಕ ಮೇಲಿನ ವಿಷಯಗಳಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ನಡೆಸುವುದು.

ಋ. ಕರ್ನಾಟಕ ಕೌಶಲ್ಯ ಮಿಷನ್ ಮತ್ತು ಜಿಲ್ಲಾ ಕೌಶಲ್ಯ ಮಿಷನ್ನಿನಿಂದ ವಹಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀ ಮತ್ತು ಜೀವನೋಪಾಯ ಇಲಾಖೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ನಿರ್ವಹಿಸುವುದು.

ಎ. ಹಿಮ್ಮುಖ ಮತ್ತು ಮುಮ್ಮುಖ ಸಂಪರ್ಕಗಳನ್ನು ಸ್ಥಾಪಿಸುವುದು.

ಏ. ಅಂತರ್ ಇಲಾಖಾ ಸಮನ್ವಯವನ್ನು ಕೈಗೊಳ್ಳುವುದು.

ಐ. ಮೇಲಿನ ವಿಷಯಗಳಿಗೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನಾಮ ನಿರ್ದೇಶನ ಮಾಡುವುದು.

ಒ. ಕರ್ನಾಟಕ ಕೌಶಲ್ಯ ಮಿಷನ್ ಮತ್ತು ಜಿಲ್ಲಾ ಕೌಶಲ್ಯ ಮಿಷನ್ನಿನಿಂದ ವಹಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀ ಮತ್ತು ಜೀವನೋಪಾಯ ಇಲಾಖೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಬಿ.ಎಸ್.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.